ಅದು ಭಾನುವಾರ ಬಿಟ್ಟು' ಅಂದಳು. ಯಂಗೊ ಕ್ಲೀನ್ ಆದ್ರೆ ಸಾಕು, ಯಾವಾರ ಆದ್ರೆ ಏನಂತೆ ಅಂದು, 'ತಿಂಗಳಿಗೆ ಎಷ್ಟು ಮಾಡಿದಿರಮ್ಮ?' ಸಾವಿತ್ರಿ ಕೇಳಿದಳು. 'ಹೊರ್ಗಡೆ ಎಲ್ಲ ಜಾಸ್ತಿ ಮಾಡ್ಕಂಡವ್ರೆ, ನಾನು ಇದೇ ಏರಿಯಾದವ್ಳು ಅಂತ ಮಾಮೂಲಿ ಒಂದುವರೆನೆ ಇಸ್ಕಂತಿದಿನಿ, ಬೇಕಾರೆ ನಾಕಾರು ಕಡೆ ಕೇಳಿ ಕೊಡ್ರಿ' ಎಂದಳು. ಈ ಲೆಕ್ಕಾಚಾರವನ್ನು ಮೊದಲೇ ಅಂದಾಜಿಸಿದ್ದ ಸಾವಿತ್ರಿ ಮಾತಿಗೆ, 'ಇನ್ನೂರು ಕಡಿಮೆ ಮಾಡ್ಕೆಂಡು, ಸಾವಿರದ ಮುನ್ನೂರು ಕೊಡ್ತಿನಿ ಬರ್‍ರಿ' ಎಂದಳು. 'ಅಕ್ಕೋರೆ ನನ್ಗೆ ನಿಂತು ಮಾತಾಡಕೆ ಟೈಮಿಲ್ಲ. ಬೇಕಾದ್ರೆ ಹೇಳ್ರಿ, ಇಲ್ಲ ಬೇರೆ ಕಡೆ ನೋಡ್ಕಳ್ರಿ, ನಂಗು ಕೆಲ್ಸ ಕಮ್ಮಿ ಆಗುತ್ತೆ' ಎಂದು ಹೊರಟೇ ಬಿಟ್ಟಳು. ದಿಗಿಲುಗೊಂಡ ಸಾವಿತ್ರಿ ಕೆಲಸದಾಕೆ ಹೋಗೇ ಬಿಟ್ಟಾಳೆಂದು, 'ಅಯ್ಯೊ ಹೋಗ್ಲಿ ಬರ್‍ರಿ ಕೊಡಾನ' ಎಂದು ಮತ್ತೆ ತಡೆದಳು. ಸಮಾಧಾನಕ್ಕೆ ಬಂದ ಶಿವಮ್ಮ, 'ಸರಿ ಯಾವಾಗಿಂದ ಬರನ ಹೇಳ್ರಿ' ಕೇಳಿದಳು. 'ಅಯ್ಯೊ, ನಮ್ಗೆ ಇವತ್ತಿಂದನೆ ಬಂದ್ರೆ ಒಳ್ಳೇದು' ಅಂದಳು. ಕಾಂಪೌಂಡ್ ಒಳಗಿದ್ದ ನಲ್ಲಿ ಜಾಗವನ್ನೊಮ್ಮೆ ಕೆಲಸದಾಕೆ ಪರೀಕ್ಷಿಸಿ, 'ಹು ಸರಿ, ಪಾತ್ರೆನೆಲ್ಲ ಹರ್ಗಡೆ ನಲ್ಲಿ ಹತ್ರ ಹಾಕಿ ಹೋಗಿರಿ, ಸಂಜೆಗೆ ಬಂದು ತೊಳೆದಿಟ್ಟೆರ್ತಿನಿ' ಎಂದು, 'ಈಗ ಹೊತ್ತಾಯ್ತು' ಎಂದು ಬಿರಿ ಬಿರನೆ ಹೊರಟೇ ಬಿಟ್ಟಳು.

ಸಾವಿತ್ರಿಗೆ ಎಷ್ಟೋ ನಿರಾಳವಾದಂತಾಯಿತು. ಅಂದಿನ ಬೆಳಗಿನ ಕೆಲಸಗಳನ್ನೆಲ್ಲ ಲವಲವಿಕೆಯಿಂದಲೇ ಮುಗಿಸಿದ ಸಾವಿತ್ರಿ ಮೊದಲ ದಿನವೇ ಜಾಸ್ತಿ ಕೆಲ್ಸ ಕೊಟ್ರೆ ಹೆದರಿಕೊಂಡಾಳೆಂದು ಮನದಲ್ಲೇ ತೀರ್ಮಾನಿಸಿ, ಅವತ್ತಿನ ತಿಂಡಿ ತಿಂದ ತಟ್ಟೆ ಲೋಟಗಳು ಅವು ಇವು ಎಂದು ಒಂದೆರೆಡನ್ನು ಮಾತ್ರ ಕೂಡಾಕಿ ಬೀಗ ಹಾಕಿಕೊಂಡು ಆಫೀಸ್‌ಗೆ ಹೋದಳು. ಅಂದು ಸಂಜೆ ವಾಪಸ್ ಬರುವಾಗ ಏನೋ ಒಂದು ಬಗೆಯ ಸಮಾಧಾನ ಅವಳನ್ನ ಆವರಿಸಿತ್ತು. ಮನೆ ತಲುಪಿದಾಗ ಎಂದಿನಂತೆ ಮಕ್ಕಳು ಅದಾಗಲೆ ಬಂದು ಕಾಂಪೌಂಡ್ ಒಳಗೆ ಆಡುತ್ತಿದ್ದವು. ಈ ಕಡೆ ನೋಡಿದರೆ ತಾವು ಮುಸ್ರೆ ಮಾಡಿ ಬಿಟ್ಹೋಗಿದ್ದ ತಟ್ಟೆ ಲೋಟಗಳು ಶುದ್ಧವಾಗಿ ಬೇಸನ್ ಒಂದರಲ್ಲಿ ಫಳ ಫಳ ಹೊಳೆಯುತ್ತಿದ್ದವು. ಅವುಗಳ ಮೇಲಿದ್ದ ಇನ್ನೂ ಜೀವಂತವಾಗಿದ್ದ ನೀರಿನ ಗುಳ್ಳೆಗಳು ಶಿವಮ್ಮ ಈಗಷ್ಟೆ ಬಂದು ಬೆಳಗಿ ಹೋಗಿರುವುದನ್ನ ಸೂಚಿಸುತ್ತಿದ್ದವು. ಸಾವಿತ್ರಿಯ ಮುಖ ಅರಳಿತು. ಬಾಗಿಲು ತೆಗೆದವಳೆ ಪಾತ್ರೆಗಳನ್ನು ಒಳ ತೆಗೆದುಕೊಂಡು ಹಸಿದು ಬಂದಿದ್ದ ಮಕ್ಕಳಿಗೆ ತಕ್ಷಣವೇ ಏನನ್ನೊ ಬೇಯಿಸಿಕೊಟ್ಟಳು. ಗಂಡ ಬಂದಾಗ ಇಂದು ಎಂದಿನಂತೆ ಸಾವಿತ್ರಿ ಸಿಡುಕದೆ ಬಿಸಿ ಬಿಸಿ ಕಾಫಿ ಮಾಡಿಕೊಟ್ಟಳು.

ಇನ್ನ ಮಾರನೆ ದಿನ ಹೇಗಿದ್ರು ಶಿವಮ್ಮ ಬರ್‍ತಳೆ ಎಂಬ ಧೈರ್ಯದ ಮೇಲೆ ರಾತ್ರಿ ಅಡುಗೆ ಊಟದ, ಬೆಳಗಿನ ಕಾಫಿ ತಿಂಡಿಯ ಎಲ್ಲಾ ತಟ್ಟೆ ಲೋಟ ಪಾತ್ರೆ ಕುಕ್ಕರ್‌ಗಳನ್ನು ಕೂಡಿ ಹಾಕಿ ಎಂದಿನಂತೆ ಆಫೀಸ್‌ಗೆ ಹೋದಳು. ಇಂದು ಅತ್ಯಂತ ಲವಲವಿಕೆಯಿಂದ ತನ್ನ ಸಹಪಾಠಿಗಳಿಗೂ ಅಚ್ಚರಿಯಾಗುವಂತೆ ಆಫೀಸ್ ಕೆಲಸದಲ್ಲೂ ತೊಡಗಿಕೊಂಡಿದ್ದಳು. ಹಿಂತಿರುಗಿ ಮನೆಗೆ ಬರುವಾಗ ಮಕ್ಕಳು ಅತೀವ ಇಷ್ಟ ಪಡುವ ಜಾಮೂನನ್ನು ಹೋದ ತಕ್ಷಣವೇ ಮಾಡಿಕೊಡಬೇಕೆಂದು ತೀರ್ಮಾನ ಮಾಡಿಕೊಂಡು ಬಸ್ ಇಳಿದು ಬರಬರನೆ ಮನೆಗೆ ಬಂದಳು. ಕಾಂಪೌಂಡ್ ಹೊರಗಿನಿಂದಲೇ ಕುತೂಹಲದಿಂದ ತಾನಿಟ್ಟಿದ್ದ ಪಾತ್ರೆಗಳ ಕಡೆ ನೋಡಿದಳು. ತಾನು ಬೆಳಗ್ಗೆ ಹೇಗೆ ಮುಸ್ರೆ ಪಾತ್ರೆಗಳನ್ನು ಇಟ್ಹೋಗಿದ್ದಳೋ ಅವೆಲ್ಲ ಒಂಚೂರು ಮುಕ್ಕಾಗದೆ ಹಾಗೆ ಇದ್ದವು. ಸಾವಿತ್ರಿಗೆ ಆಶ್ಚರ್ಯ ದಿಗಿಲು ಎಲ್ಲವೂ ಒಮ್ಮೆಲೆ ಘಟಿಸಿತು. ಅದ್ಹೇಗೆ ಮನೆ ಬೀಗ ತೆಗೆದು ಮಕ್ಕಳನ್ನು ಒಳಬಿಟ್ಟಳೋ ಕಾಣೆ, ಅಲ್ಲೆ ಮಂಚದ ಮೇಲೆ ಕುಸಿದು ಕೂತಳು. ಇನ್ನೂ ಪಾತ್ರೆಗಳು ಆಚೆಯೇ ಬಿದ್ದಿರುವುದಕ್ಕಿರುವ ಕಾರಣಗಳನ್ನು ಆಕೆಯ ಮೆದುಳು ನಾನಾ ತರದಲ್ಲಿ ಯೋಚಿಸತೊಡಗಿತು. ಬಹುಶಃ ಶಿವಮ್ಮ ಇನ್ನೂ ಬಂದಿರಲಿಕ್ಕಿಲ್ಲ, ಇಲ್ಲವೆ ಹೊಸ ಮನೆ ಅಲ್ಲವ ಮರೆತು ಬಿಟ್ಹೋಗಿರಬೇಕು, ಆನಂತರದಲ್ಲಿ ತಾನೆಸಗಿದ ಪ್ರಮಾದದ ನೆನಪಾಗಿ ಬಂದು ಕತ್ತಲಾದರೂ ಸರಿಯೆ ಕೆಲಸ ಮಾಡಿಕೊಡಬಹುದು. ಇನ್ನೊಮ್ಮೆ, ಅವಳಿಗೇನಾದರೂ ಜ್ವರ ಗಿರ ಮೆಟ್ಟಿಕೊಂಡಿತೆ,